ದಿನಾಂಕ: ಫೆಬ್ರವರಿ ೧೪, ೨೦೧೪

<u>ಆಂಧ್ರಪ್ರದೇಶದಲ್ಲಿ ಸಂಧಾನದ ಆವಶ್ಯಕತೆ</u>

ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಯುಪಿಎ ಅಧಿಕಾರಾವಧಿ ತನ್ನ ಅಂತಿಮ ಹಂತಕ್ಕೆ ತಲುಪಿದ್ದು, ವ್ಯವಸ್ಥೆಯ ನಿರ್ವಹಣೆಯಲ್ಲಿ ಅದರ ಪಾತ್ರ ಅದೃಶ್ಯವಾಗಿದೆ. "ನನ್ನ ನಂತರ ಪ್ರಳಯ" ಎಂಬ ನಾಣ್ಣುಡಿಯನ್ನು ಯುಪಿಎ ಸಿದ್ಧಪಡಿಸುತ್ತಿದೆ. ಅಧಿಕಾರಾವಧಿಯ ಆರಂಭದಲ್ಲಿ, ಸಂಸ್ಥೆಗಳ ಮೌಲ್ಯಗಳ ಅವನತಿ, ಆರ್ಥಿಕ ಅಭಿವೃದ್ಧಿದರ ಕುಸಿತ, ಭ್ರಷ್ಟಾಚಾರದಿಂದ ಸರ್ಕಾರಿ ನಿರ್ಣಯಗಳ ವಿಶ್ವಾಸಾರ್ಹತೆ ಕುಸಿತವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ತೆಲಂಗಾಣ ರಾಜ್ಯ ಸೃಷ್ಟಿಸಲು ವ್ಯಾಜ್ಯ ಇತ್ಯರ್ಥ ಮಾರ್ಗ ಅನುಸರಿಸುವಲ್ಲಿ ಯುಪಿಎ ಸಂಪೂರ್ಣ ವಿಫಲವಾಗಿದೆ. ಆಕ್ರೋಶಗೊಂಡ ಅವರ ಪಕ್ಷದ ನಾಯಕರ ಮೇಲೆ ಅವರು ನಿಯಂತ್ರಣ ಕಳೆದುಕೊಂಡಿದ್ದಾರೆ. ಗದ್ದಲವಿಲ್ಲದೆ ಸಂಸತ್ ಅಧಿವೇಶನ ನಡೆಯುವ ದಿನಗಳು ಅಪರೂಪವಾಗಿವೆ. ಮುಖ್ಯ ವಿರೋಧಪಕ್ಷಗಳು ಗದ್ದಲಕ್ಕೆ ಕಾರಣವಾಗದೆ, ಯುಪಿಎ ಸದಸ್ಯರೇ ಸದನದಲ್ಲಿ ಕೋಲಾಹಲ ಎಬ್ಬಿಸಿದ್ದಾರೆ. ಸರ್ಕಾರ, ಅದರಲ್ಲೂ ವಿಶೇಷವಾಗಿ ಪ್ರಧಾನ ಮಂತ್ರಿಗಳು ಹಾಗೂ ಗೃಹ ಸಚಿವರು ಸಂಪೂರ್ಣ ನಿಷ್ಕ್ರಿಯರಾಗಿದ್ದು, ವಿವಾದ ಬಗೆಹರಿಸಲು ಯಾವುದೇ ಉಪಕ್ರಮ ತೆಗೆದುಕೊಳ್ಳುತ್ತಿಲ್ಲ.

ವಿಶಾಲ ತಳಹದಿಯ ಸಂಧಾನ ಸೂತ್ರ ಹುಡುಕಲು ಈಗಲೂ ಕಾಲ ಮಿಂಚಿಲ್ಲ. ಸೀಮಾಂಧ್ರ ರಾಜಧಾನಿ ಗುರುತಿಸುವುದು, ಸೀಮಾಂಧ್ರಾಗೆ ಪ್ರತ್ಯೇಕ ಉಚ್ಚ ನ್ಯಾಯಾಲಯ ಒದಗಿಸುವುದು, ವಿಭಜನೆಯಿಂದ ಸಂಭವಿಸುವ ಆದಾಯ ಖೋತ ಭರಿಸುವುದು ಮತ್ತು ಈ ಪ್ರಾಂತ್ಯದಲ್ಲಿ ಜಲ ಮತ್ತು ವಿದ್ಯುತ್ ಪೂರೈಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಇಚ್ಛಾಶಕ್ತಿ ಇದ್ದರೆ ಸಾಕು ಸಮಸ್ಯೆ ಬಗೆಹರಿಯುತ್ತದೆ. ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಜಾರ್ಖಂಡ್, ಉತ್ತರಾಖಂಡ್ ಹಾಗೂ ಛತ್ತೀಸ್‌ಘಡ್ ರಾಜ್ಯಗಳನ್ನು ಸರ್ವಾನುಮತದಿಂದ ಸೃಷ್ಟಿಸುವಲ್ಲಿ ಯಶಸ್ವಿಯಾಗಿತ್ತು. ಸಂಸದೀಯ ಬಿಕ್ಕಟ್ಟು ಹಾಗೂ ಗುರುವಾರ ಕಂಡ ಅಸಹನೀಯ ಬೆಳವಣಿಗೆಗಳೆಲ್ಲವು ಯುಪಿಎ ಪ್ರಚೋದಿತ ತಂತ್ರಗಾರಿಕೆಯಾಗಿವೆ. ಸಂಸತ್ ಕಲಾಪಕ್ಕೆ ಅಡ್ಡಿ ಪಡಿಸುತ್ತಿರುವ ಹಲವರು ಯುಪಿಎ ಸದಸ್ಯರಾಗಿದ್ದಾರೆ. ತೆಲಂಗಾಣ ಹಾಗೂ ಸೀಮಾಂಧ್ರ ಸದಸ್ಯರ ಭಿನ್ನಮತ ದೂರಮಾಡಲು ಸರ್ಕಾರ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಸಂಧಾನ ಸೂತ್ರ ಕಂಡು ಹಿಡಿಯಲು ಸರ್ಕಾರ ವೇದಿಕೆಯನ್ನೇ ಸೃಷ್ಟಿಸಿಲ್ಲ. ಸಂಸತ್‌ನಲ್ಲಿ ಈ ಎರಡೂ ಪ್ರಾಂತ್ಯದ ಜನರ ಆಶೋತ್ತರಗಳನ್ನು ಚರ್ಚಿಸಲು ಸಾಧ್ಯವಾಗುತ್ತಿಲ್ಲ. ಈ ಸನ್ನಿವೇಶದಲ್ಲಿ ಭಾರತೀಯ ಪ್ರಜಾಪ್ರಭುತ್ವಕ್ಕೆ ಕಳಂಕ ತರುವ ಬೆಳವಣಿಗೆಗಳು ನಡೆದಿವೆ. ಸಂಸತ್ ಸದನದ ಈ ಅವಹೇಳನಕಾರಿ ಘಟನೆಗಳಿಂದ ಕುಟಿಲ ರಾಜಕಾರಣಿಯ ಚಹರೆ ಜನರ ಮನಸ್ಸಿನಲ್ಲಿ ಅಚ್ಚು ಮೂಡಿಸಿದೆ. ತೆಲಂಗಾಣ ಹಾಗೂ ಸೀಮಾಂಧ್ರ ಪ್ರಾಂತ್ಯಗಳ ಜನರು, ವಂಚನೆಯಾಗಿದೆ ಎಂಬ ಭಾವನೆಯನ್ನು ಹೊಂದಿದ್ದಾರೆ. ರಾಜಸೂತ್ರದ ಎಲ್ಲಾ ಲೌಕಿಕ ಜ್ಞಾನವನ್ನು ಯುಪಿಎ ಸರ್ಕಾರ ಕಳೆದುಕೊಂಡಂತಿದೆ. ಸಂಸತ್ತಿನ ಒಳಗೆ ಅಥವಾ ಹೊರಗೆ ವೇದಿಕೆ ರೂಪಿಸಲು ಈಗಲೂ ಕಾಲ ಮಿಂಚಿಲ್ಲ. ತಕ್ಷಣ, ಸೀಮಾಂಧ್ರ ಪ್ರಾಂತ್ಯದ ಜನರ ಪ್ರಾಮಾಣಿಕ ಆಶೋತ್ತರಗಳಿಗೆ ಸ್ಪಂದಿಸಿ ತೆಲಂಗಾಣ ರಾಜ್ಯದ ನಿರ್ಮಾಣಕ್ಕೆ ಪ್ರಯತ್ನ ನಡೆಯಬೇಕಿದೆ.

*****